**ಚಾಸಾಃ 10  ಪ್ರಾಸಾಃ 7**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 516/2025**

| | |
|---|---|
| ಹೆಸರು | :ಮಂಜುನಾಥ್ |
| ತಂದೆಯ ಹೆಸರು | :ಎಲ್ಲಪ್ಪ ರಾಜು |
| ಪ್ರಾಯ | :22 ವರ್ಷ |
| ಉದ್ಯೋಗ | :ಗ್ರಾಮ ಆಡಳಿತಾಧಿಕಾರಿ, ಸಂಪಾಜೆ ಗ್ರಾಮ |
| ವಾಸ | :ಸಂಪಾಜೆ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 07.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2023 ರಿಂದ ಇಲ್ಲಿಯವರೆಗೆ ಸಂಪಾಜೆ ಗ್ರಾಮದ ಗ್ರಾಮ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-11 ರವರು ನಮ್ಮ ಕಂದಾಯ ನಿರೀಕ್ಷಕರಾಗಿರುತ್ತಾರೆ.

ಸುಳ್ಯ ಪೊಲೀಸ್ ಠಾಣೆಯಿಂದ ನಮ್ಮ ಸುಳ್ಯ ತಹಶೀಲ್ದಾರ್ ರವರಿಗೆ ಪತ್ರ ಬರೆದು ಸಜ್ಜನ ಸಭಾಭವನದ ಬಳಿ ತಕ್ಷೀರು ನಡೆದ ಸ್ಥಳ ಯಾರಿಗೆ ಸೇರಿದ್ದು ಎಂಬ ಬಗ್ಗೆ ವರದಿ ನೀಡುವಂತೆ ತಿಳಿಸಿದ್ದು, ಅದರಂತೆ ತಹಶೀಲ್ದಾರ್ ರವರು ನಮ್ಮ ಕಂದಾಯ ನಿರೀಕ್ಷಕರಿಗೆ ಈ ಬಗ್ಗೆ ವರದಿ ಕೇಳಿದ್ದು ದಿನಾಂಕ 8.7.2025 ರಂದು ನಮ್ಮ ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ನನಗೆ ತಿಳಿಸಿದ್ದು, ನಾನು ದಿ. 23.7.2025 ರಂದು ಸ್ಥಳ ಪರಿಶೀಲನೆ ಮಾಡಲು ಹೋಗಿದ್ದು ಆ ಸಮಯದಲ್ಲಿ ಚಾಸಾ-15 ರವರು

ನನಗೆ ಸದರಿ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳವನ್ನು ಎಫ್.ಎಂ.ಬಿ ಸರ್ವೆ ದಾಖಲೆ ಮತ್ತು ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಗೊಂಡ ಬಗ್ಗೆ ನೀಡಿದ ನಕ್ಷೆಯ ಆಧಾರದ ಮೇರೆಗೆ ಸದರಿ ಸ್ಥಳ ಸಂಪಾಜೆ ಗ್ರಾಮದ ಸ.ನಂಃ 85/1C3 ಆಗಿದ್ದು ಅದು 0.87.25 ಎಕ್ರೆ ವಿಸ್ತೀರ್ಣ ಇದ್ದು ಅದು ಆರ್.ಟಿ.ಸಿ ಪ್ರಕಾರ ಉಮ್ದುರ್ ಬಿನ್ ಸೈದು ಬ್ಯಾರಿ ಎಂಬುವವರಿಗೆ ಸೇರಿದ್ದಾಗಿರುತ್ತದೆ. ಈ ಬಗ್ಗೆ ನಮ್ಮ ಕಂದಾಯ ನಿರೀಕ್ಷಕರಿಗೆ ವರದಿ ನೀಡಿರುತ್ತೇನೆ. ಸ್ಥಳ ಪರಿಶೀಲನೆ ಮಾಡುವ ಸಮಯದಲ್ಲಿ ಪೊಟೋ ತೆಗೆದಿದ್ದು ಸದರಿ ಪೋಟೋವನ್ನು ನಿಪಿ-22 ಎಂದು ಗುರುತಿಸಲಾಯಿತು. ಸದರಿ ವರದಿಯನ್ನು ನೋಡಿದರೆ ಗುರುತಿಸುತ್ತೇನೆ.

(ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಿದ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ